# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 708
ಸದಸ್ಯರ ಹೆಸರು : ಡಾ.ತಳವಾರ ಸಾಬಣ್ಣ
ಉತ್ತರಿಸುವ ದಿನಾಂಕ : 23-12-2022
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಿ/ಕಬ್ಬಲಿಗಾ/ಬೆಸ್ತ/ಗಂಗಾಮತ ಮತ್ತು ಇದರ 37 ಪರ್ಯಾಯ ಪದಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಸುಮಾರು 40 ವರ್ಷಗಳಿಂದ ಹೋರಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ಬಂದಿದ್ದಲ್ಲಿ, ಈ ಸಮುದಾಯದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಬೇಕಾದ ದಾಖಲೆಗಳು ಮತ್ತು ಕುಲಶಾಸ್ತ್ರೀಯ ಅಧ್ಯಯನ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಕಳಿಸಿದ ಮೇಲೆ ರಾಜ್ಯ ಸರ್ಕಾರವು ಕೇಂದ್ರದ ಮೇಲೆ ಸರ್ಕಾರ ತೀವ್ರ ಪ್ರಯತ್ನ ಮಾಡಿದೆಯೇ; | ಬೆಸ್ತ/ಗಂಗಾಮತ ಮತ್ತು ಇದರ 37 ಪರ್ಯಾಯ ಪದಗಳು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು, ಅಂತಿಮ ವರದಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ದಿನಾಂಕ:03/03/2014 ರಲ್ಲಿ ಕಳುಹಿಸಲಾಗಿದೆ.<br><br>ನಂತರ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಕೇಳಲಾಗಿದ್ದ ಅಂಶಗಳ ಬಗ್ಗೆ ಸಮರ್ಥನೆ ಅಭಿಪ್ರಾಯಗಳನ್ನು ಕನ್ನಡ ವಿಶ್ವಿವಿದ್ಯಾಲಯ, ಹಂಪಿ ಇವರಿಂದ ಪಡೆದು, ರಾಜ್ಯ ಸರ್ಕಾರದಿಂದ ದಿನಾಂಕ:12/07/2019 ಮತ್ತು ದಿನಾಂಕ:02/02/2021 ರಂದು ಹೆಚ್ಚುವರಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. |
| ಇ) | ಹಿಂದುಳಿದ ವರ್ಗಗಳಲ್ಲಿ ಅತಿ ಹಿಂದುಳಿದ ಈ ಸಮುದಾಯದವರು ಸರ್ಕಾರದ ಮೇಲೆ ಸಾಕಷ್ಟು ಭರವಸೆ ಇಟ್ಟುಕೊಂಡಿದ್ದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಈಗಾಗಲೇ ಮೇಲಿನಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. |
| ಈ) | ಈ ಸಮುದಾಯದ ಟೋಕರಿ, ಕೋಳಿ/ಡೋರ್‌ಕೋಳಿ ಪರ್ಯಾಯ ಪದಗಳು ಈಗಾಗಲೇ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವುದರಿಂದ ಕೋಲಿ/ಬೆಸ್ತ ಮತ್ತು ಇತರ 37 ಪರ್ಯಾಯ ಪದಗಳು ಬಿಟ್ಟು ಹೋದ ಪರ್ಯಾಯ ಪದಗಳೆಂದು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಕ್ರಮವಹಿಸಲಾಗುವುದೇ; (ವಿವರ ನೀಡುವುದು) | ಕರ್ನಾಟಕ ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ KoliDhor, TokreKoli, Kolcha, Kolgha ಜಾತಿಗಳು ಸೇರಿರುತ್ತವೆ. ಬೆಸ್ತ/ಗಂಗಾಮತ ಮತ್ತು ಇದರ 37 ಪರ್ಯಾಯ ಪದಗಳು ಹಿಂದುಳಿದ ವರ್ಗಗಳ ಪ್ರವರ್ಗ-1 ರಲ್ಲಿ ಇರುವುದರಿಂದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.<br><br>ಭಾರತ ಸಂವಿಧಾನ ಅನುಚ್ಛೇದ 342(2) ಪ್ರಕಾರ ಯಾವುದೇ ಜಾತಿಯನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ.<br><br>ಬೆಸ್ತ/ಗಂಗಾಮತ ಮತ್ತು ಇದರ 37 ಪರ್ಯಾಯ ಪದಗಳು KoliDhor, TokreKoli, Kolcha, Kolgha ಜಾತಿಗಳ ಪರ್ಯಾಯ ಪದಗಳು ಅಲ್ಲದೆ ಇರುವುದರಿಂದ ಮತ್ತು ಹಿಂದುಳಿದ ವರ್ಗಗಳ |

PHOTO-2022-12-17-13-14-32.jpg https://mail.google.com/mail/u/0/

| | | |
|---|---|---|
| | | ಪಟ್ಟಿಯಲ್ಲಿ ಇರುವುದರಿಂದ ಈಗಾಗಲೇ ಮೇಲ್ಕಂಡಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಪ್ರಸ್ತುತ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಹಂತದಲ್ಲಿ ಬಾಕಿ ಇರುತ್ತದೆ. |

ಸಕಇ 154 ಎಸ್‌ಎಡಿ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು